ಮಿಕಿಯ ಲೋಹಚುಂಬಕ



ಫ್ರ್ಯಂಕಲಿನ್ ಎಮ್ ಬ್ರ್ಯಾನ್ಲಿ ಮತ್ತು ಎಲಿಯೋನಾರ್ ವಾನ್
ಚಿತ್ರಗಳುಃ ಕ್ರೋಕೆಟ್ ಜಾನ್ಸನ್

ಮಿಕಿಯ ಲೋಹಚುಂಬಕ

ಫ್ರ್ಯಾಂಕಲಿನ್ ಎಮ್ ಬ್ರ್ಯಾನ್ಲಿ ಮತ್ತು ಎಲಿಯೋನಾರ್ ವಾನ್
ಚಿತ್ರಗಳು: ಕ್ರೋಕೆಟ್ ಜಾನ್ಸನ್

ಕನ್ನಡಕ್ಕೆ ಪ್ರಭಾಕರ ನಾನಾವಟಿ

ಇಲ್ಲಿ ನೋಡಿ, ಮಿಕಿಯು ಚಿತ್ರಗಳಿರುವ
ಪುಸ್ತಕವನ್ನು ನೋಡುತ್ತಲಿದ್ದಾನೆ.

ಅವನ ತಾಯಿಯ ಕರೆಯನ್ನು ಆತ ಕೇಳಿದ್ದಾನೆ.
ಅವಳಿಗೆ ಪಿನ್ನುಗಳಿರುವ ಡಬ್ಬಿ ಬೇಕಾಗಿದೆ.





ಮಿಕಿ ಪುಸ್ತಕ ನೋಡುವದನ್ನು ಬಿಟ್ಟು ಪಿನ್ನುಗಳಿರುವ ಡಬ್ಬಿಯನ್ನು ತರಲು ಒಳಗೆ ಹೋಗುತ್ತಾನೆ.

ತಾಯಿಯ ಕೈಯಲ್ಲಿ ಡಬ್ಬಿ ಕೊಡಲೆಂದು ಓಡುತ್ತ ಬರುತ್ತಾನೆ.

ಪಾಪ! ಓಡುತ್ತಿರವಾಗ ಕಾಲು ಹಾಸಿಗೆಯಲ್ಲಿ ಸಿಕ್ಕು ಅವನು ಕೆಳ ಬೀಳುತ್ತಾನೆ.

ಡಬ್ಬಿಯಲ್ಲಿಯ ಪಿನ್ನುಗಳೆಲ್ಲ ಚೆಲ್ಲಾಪಿಲ್ಲಿಯಾಗಿ ಹಾಸಿಗೆಯ ಮೇಲೆ, ನೀಲಿ ಖುರ್ಚಿಯ ಮೇಲೆ ಬೀಳುತ್ತವೆ.


ಎಷ್ಟೊಂದು ಗೊಂದಲ!



ಮಿಕಿ ಪಿನ್ನುಗಳನ್ನು ಡಬ್ಬಿಯಲ್ಲಿಡಲು ಪ್ರಯತ್ನಿಸುತ್ತಾನೆ. ಒಂದು ಪಿನ್ನು, ಇನ್ನೊಮ್ಮೆ ಎರಡು ಪಿನ್ನುಗಳು, ಮತ್ತೊಮ್ಮೆ ಮೂರು ಪಿನ್ನುಗಳು. ಹೀಗೆ ಆತನು ಪಿನ್ನುಗಳನ್ನು ಡಬ್ಬಿಯಲ್ಲಿ ಇಡುತ್ತಾನೆ.

ಇದೆಲ್ಲ ನಿದಾನವಾದ ಕೆಲಸ. ಸ್ಪೂನಿನಿಂದ ಕೆಲಸ ಬೇಗನೆ ಆಗಬಹುದು.

ಒಂದು ಸ್ಪೂನು, ಎರಡು ಸ್ಪೂನು. ಆದರೂ ಕೆಲಸ ಬೇಗನೆ ಮುಗಿಯಲಾರದು.



"ಕುದುರೆಲಾಳದ ಚುಂಬಕ ಇದಕ್ಕೆ ಸಹಾಯ ಮಾಡಬಹುದು."

ಮಿಕಿಯು ತಂದೆಗೆ ತನ್ನ ಗೋಳನ್ನು ಹೇಳಿದಾಗ ಅವರು ಅವನ ಕೈಯಲ್ಲಿ ಒಂದು ಭಾರವಾದ ವಸ್ತು ಕೊಡುತ್ತಾರೆ.

ಇದು ಸಹಾಯ ಮಾಡಬಹುದೇ?

ಆದರೆ ಹೇಗೆ? ಇದು ಎಲ್ಲ ಪಿನ್ನುಗಳನ್ನು ಒಂದು ಗೂಡಿಸಿ ರಾಶಿ ಮಾಡಬಹುದೇ?

ಪ್ರಯತ್ನಿಸಿ ನೋಡಬೇಕು.



ಓಹ! ಪಿನ್ನುಗಳೆಲ್ಲ ಚುಂಬಕದ ತುದಿಗಳಲ್ಲಿ ಮುತ್ತಿದವು.

ಅವುಗಳನ್ನು ನೂಕುವ ಕೆಲಸ ಕೂಡ ಮಾಡಬೇಕಿಲ್ಲ.



"ಇಲ್ಲಿವೆ ನಿನ್ನ ಪಿನ್ನುಗಳು!" ಆತ ತಾಯಿಗೆ ಹೇಳಿದನು.

ಆತನು ಲೋಹಚುಂಬಕವನ್ನು ಅಲುಗಾಡಿಸಿದನು. ಕೆಲವು ಪಿನ್ನುಗಳು ತಾಯಿಯ ತೊಡೆ ಮೇಲೆ, ಕೆಲವು ಚುಂಬಕಕ್ಕೆ ಅಂಟಿಕೊಂಡಿದ್ದವು. ಆತನಿಗೆ ಅವುಗಳನ್ನು ಜಗ್ಗಬೇಕಾಯಿತು.

ಇದೆಲ್ಲ ಒಂದು ಮೋಜು!
ಅವನು ಇನ್ನಷ್ಟು ಪಿನ್ನುಗಳನ್ನು ಶೇಖರಿಸ-ತೊಡಗಿದನು.



ಆಯಸ್ಕಾಂತವನ್ನು ಹಾಸಿಗೆಯ ಮೂಲೆ ಮೂಲೆಗಳಲ್ಲಿ, ನೀಲಿ ಖುರ್ಚಿಯ ಸಂದುಗಳಲ್ಲಿ ಒಯ್ದು ಪಿನ್ನುಗಳು ಅಂಟಿಕೊಳ್ಳುವಂತೆ ಮಾಡಿದನು.

ಅವನಿಗೆ ಈಗ ಎಲ್ಲ ಪಿನ್ನುಗಳು ದೊರೆತವು. ಅವುಗಳನ್ನು ಡಬ್ಬಿಯಲ್ಲಿ ತುಂಬಿದನು.

ಅವನಿಗೆ ಇದು ಒಂದು ಮೋಜಿನ ಆಟ. ಎಲ್ಲ ಪಿನ್ನುಗಳನ್ನು ಹೊರಚೆಲ್ಲಬೇಕೆಂದು ಅನ್ನಿಸಿತು.

ಆದರೆ ಅವನ ತಾಯಿಗೆ ಈ ಪಿನ್ನುಗಳು ಬೇಕಿದ್ದವು.



ಆತನು ಅವಳ ಹೊಲಿಗೆಯ ಬುಟ್ಟಿಯಲ್ಲಿ ಇಣಿಕಿ ಹಾಕಿ ನೋಡಿದನು. ಇದರಲ್ಲಿ -
ಕತ್ತರಿ ಸೂಜಿ, ದಾರ, ಪ್ಲಾಸ್ಟಿಕ್ ವಸ್ತುಗಳು, ಕೊಕ್ಕೆ, ಮುಂತಾದ ವಸ್ತುಗಳು ಇದ್ದವು.

ಆತನು ಚುಂಬಕವನ್ನು ಬುಟ್ಟಿಯ ಒಳಸೇರಿಸಿದನು.

ಚುಂಬಕದ ಸುತ್ತ ಕತ್ತರಿ, ಸೂಜಿ, ಕೊಕ್ಕೆಗಳು ಅಂಟಿಕೊಂಡವು.

ಪ್ಲಾಸ್ಟಿಕ್ ಬಟನ್ ಇಲ್ಲ? ದಾರವಿಲ್ಲ?

ಚುಂಬಕ ಕೇವಲ ಧಾತುಗಳನ್ನು ಆಕರ್ಷಿಸುತ್ತಿತ್ತು.



ಆತನು ಕತ್ತರಿ, ಸೂಜಿ ಮತ್ತು ಕೊಕ್ಕೆಗಳನ್ನು ಬೇರ್ಪಡಿಸಿದನು. ಸುತ್ತಮುತ್ತಲಿರುವ ವಸ್ತುಗಳನ್ನು ನೋಡತೊಡಗಿದನು.

ಅವನು ಕಾಜಿನ ತಟ್ಟಲೆ, ಸೆರಾಮಿಕ್ ಗೊಂಬೆ, ಬೆಳ್ಳಿಯ ವಸ್ತು, ದುಂಡಗಿರುವ ಕಲ್ಲು ಇವುಗಳನ್ನು ಆಕರ್ಷಿಸಲು ಪ್ರಯತ್ನಿಸಿದನು.

ಚುಂಬಕ ಅವುಗಳಲ್ಲಿಯ ಯಾವ ವಸ್ತುಗಳನ್ನು ಹಿಡಿಯಲಿಲ್ಲ.

ಮತ್ತೆಲ್ಲಿಯಾದರೂ ಹೋಗಿ ಪ್ರಯತ್ನಿಸಬೇಕು.





ಆತನು ಅಡಿಗೆ ಮನೆಯಲ್ಲಿ ಹೋದಾಗ ಏನು ಕಾಣಿಸಿತು? — ಬಾಟಲಿಯ ಮುಚ್ಚಳ, ಸಾಬಣದ ಚೂರು, ಹೊಳೆಯುತ್ತಿರುವ ನಾಣ್ಯ. ನಾಯಿಯ ನೀರು ಕುಡಿಯುವ ಪಾತ್ರೆ?

ಮಿಕಿ ನೆಲದ ಮೇಲೆ ಕುಳಿತನು.ಎಲ್ಲವನ್ನು ಚೆಲ್ಲಾಪಿಲ್ಲಿಗೊಳಿಸಿದನು.

ಬಾಟಲಿಯ ಮುಚ್ಚಳ ನೀರಿನ ಪಾತ್ರೆಯಲ್ಲಿ ಬಿತ್ತು.

ಇದರಂತೆ ನಾಣ್ಯ ಕೂಡ!



ಮಿಕಿ ನೆಲದ ಮೇಲೆ ಕುಳಿತನು.ಎಲ್ಲವನ್ನು ಚೆಲ್ಲಾಪಿಲ್ಲಿಗೊಳಿಸಿದನು. ಬಾಟಲಿಯ ಮುಚ್ಚಳ ನೀರಿನ ಪಾತ್ರೆಯಲ್ಲಿ ಬಿತ್ತು. ಇದರಂತೆ ನಾಣ್ಯ ಕೂಡ!

ಚುಂಬಕ ಇವುಗಳನ್ನು ನೀರಿನಿಂದ ಎತ್ತಬಹುದು.

ಬಾಟಲಿಯ ಮುಚ್ಚಳ ಹೊರಬಂತು.

ಆದರೆ ನಾಣ್ಯ ಬರಲಿಲ್ಲ.

ಮತ್ತೊಮ್ಮೆ ಪ್ರಯತ್ನಿಸಿದನು. ಆದರೂ ನಾಣ್ಯ ಬರಲಿಲ್ಲ.

ಮಿಕಿಗೆ ಇದರ ಕಾರಣ ತಿಳಿಯಲಿಲ್ಲ.

ಆದರೆ ಆತನ ತಂದೆಗೆ ಗೊತ್ತಿರಬಹುದು.

ಇಬ್ಬರೂ ಕೂಡಿ ಬೇರೆ ಬೇರೆ ನಾಣ್ಯಗಳ
ಮೇಲೆ ಚುಂಬಕದ ಪ್ರಯೋಗ ಮಾಡಿದರು.

ಅಲ್ಯುಮಿನಿಯಮ್ ದ ತಟ್ಟೆಯ ಮೇಲೆ
ಕೂಡ...




"ಚುಂಬಕವು ಕಬ್ಬಿಣ ಮತ್ತು ಉಕ್ಕುಗಳನ್ನಷ್ಟೇ ಆಕರ್ಷಿಸುವದು. ಇನ್ನುಳಿದ ಲೋಹಗಳನ್ನಲ್ಲ." ಆತನ ತಂದೆ ಹೇಳಿದರು.

ಮಿಕಿಯು ಆಟಿಗೆಯಲ್ಲಿಯ ಕಟ್ಟಿಗೆ ಕುದುರೆಗೆ ಆಯಸ್ಕಾಂತನ್ನು ಮುಟ್ಟಿಸಿದನು.

ಏನೂ ಪರಿಣಾಮವಾಗಲಿಲ್ಲ.

ಶೀಸೆಯ ಗೊಂಬೆಗೆ ಮುಟ್ಟಿಸಿದನು.

ಏನೂ ಆಗಲಿಲ್ಲ.






ಆತನು ತನ್ನ ಆಟಿಗೆಗಳನ್ನೆಲ್ಲ ಒಂದುಗೂಡಿಸಿ ಆಟವಾಡತೊಡಗಿದನು.

ಸೂಜಿಯನ್ನು ಚುಂಬಕ ಆಕರ್ಷಿಸಿತು.

ಚುಂಬಕದ ತುದಿಯಲ್ಲಿರುವ ಸೂಜಿಗೆ ಪಿನ್ನು ಜೋತು ಬಿದ್ದಿತ್ತು.

ಸೂಜಿ ಕೂಡ ಚುಂಬಕವೇ!



ಸೂಜಿಯನ್ನು ಚುಂಬಕದಿಂದ ಬಿಡಿಸಿಟ್ಟಾಗ
ಪಿನ್ನು ಕೆಳಗೆ ಬಿತ್ತು.

ಸೂಜಿಯಿಂದ ಪಿನ್ನನ್ನು ಎತ್ತಲು
ಪ್ರಯತ್ನಿಸಿದಾಗ ಏನೂ ಆಗಲಿಲ್ಲ.

ಈಗ ಸೂಜಿ ಚುಂಬಕವಲ್ಲ!




ಮತ್ತೊಮ್ಮೆ ಚುಂಬಕಕ್ಕೆ ಸೂಜಿಯನ್ನು ಅಂಟಿಸಿ ಪಿನ್ನಿನ ಹತ್ತಿರ ಒಯ್ದಾಗ ಪಿನ್ನು ಸೂಜಿಗೆ ಅಂಟಿಸಿಕೊಂಡಿತು.!

"ನೋಡಿ. ಕೆಲವು ವೇಳೆ ಸೂಜಿಯೇ ಚುಂಬಕವಾಗುವದು. " ಆತ ತಂದೆಗೆ ಹೇಳಿದನು.


“ಅಹುದು. ನೋಡಿಲ್ಲಿ. “

ಅವರು ಸೂಜಿಯನ್ನು ಚುಂಬಕದ ಮೇಲೆ ತಿಕ್ಕತೊಡಗಿದರು.

ಒಂದು ಸಲ, ಎರಡು ಸಲ, ಮೂರು ಸಲ... ಹೀಗೆ ಸಾಕಷ್ಟು ಸಲ ತಿಕ್ಕಿದರು.



ಈಗ ಸೂಜಿ ಪಿನ್ನುಗಳನ್ನು ಆಕರ್ಷಿಸತೊಡಗಿತು. "ಇದು ಕೂಡ ಚುಂಬಕವೇ! ಇದು ಪಿನ್ನುಗಳನ್ನು ಆಕರ್ಷಿಸುತ್ತದೆ. ನಾನು ಕೂಡ ಚುಂಬಕ ಮಾಡಬಹುದು."ಅಚ್ಚರಿಯಿಂದ ಮಿಕಿ ಹೇಳಿದನು.





ಆತನು ಇನ್ನೊಂದು ಸೂಜಿಯನ್ನು ತೆಗೆದುಕೊಂಡನು. ಅದನ್ನು ಚುಂಬಕದ ಮೇಲೆ ಹಲವಾರು ಸಲ ಒಂದೇ ದಿಕ್ಕಿನಲ್ಲಿ ತಿಕ್ಕಿದನು.

ಅದು ಚುಂಬಕದಂತೆ ಕೆಲಸ ಮಾಡತೊಡಗಿತು!!



"ನೋಡಿಲ್ಲಿ, ನಾನು ಕೂಡ ಚುಂಬಕ ಮಾಡಿದ್ದೇನೆ. " ಓಡುತ್ತ ತಾಯಿಗೆ ಹೇಳತೊಡಗಿದನು.

ಓಹ...ಮತ್ತೇ ಪಿನ್ನಿನ ಡಬ್ಬಿಗೆ ಕಾಲು ತಗಲಿ ಪಿನ್ನುಗಳು ನೆಲದ ಮೇಲೆ ಚೆಲ್ಲಾಪಿಲ್ಲಿಯಾಗಿ ಎಲ್ಲ ಕಡೆಗೂ ಬಿದ್ದವು.



ಆತನು ಅವುಗಳನ್ನು ಶೇಖರಿಸತೊಡಗಿದನು.

ಆದರೆ ಈಗ ಆ ಕೆಲಸ ಸುಲಭವಾಗಿತ್ತು. ಆತನ
ಹತ್ತಿರ ಚುಂಬಕವಿತ್ತು.
ಮಿಕಿಯ ಸ್ವಂತ ಮಾಡಿದ ಚುಂಬಕ!





ಎಷ್ಟೋ ರೀತಿಯ ಚುಂಬಕಗಳಿವೆ. ಪಟ್ಟಿಯ ಆಕಾರದ ಚುಂಬಕ. ಉಂಗುರದ ಚುಂಬಕ, ಗಾಲಿಯ ಆಕಾರದ ಚುಂಬಕ....

ಮಿಕಿಯು ಕುದುರೆಲಾಳದ ಆಕಾರದ ಚುಂಬಕದಿಂದ ಪಿನ್ನುಗಳನ್ನು ಎತ್ತುತ್ತಿದ್ದನು.

ನೀವು ಚುಂಬಕ ಪಟ್ಟಿಯಿಂದ ಪಿನ್ನುಗಳನ್ನು ಎತ್ತಿ ನೋಡಿ.

ಮಿಕಿಯಂತೆ ನಿಮ್ಮ ಚುಂಬಕದಿಂದ ವಸ್ತುಗಳ ರಾಶಿ ಹಾಕಲು ಪ್ರಯತ್ನಿಸಿ.

ನಿಮ್ಮ ಹೊಸ ಚುಂಬಕದಿಂದ ಮತ್ತೇ ಯಾವದಾದರೂ ಕೆಲಸ ಮಾಡಲು ಬರುವದೇ?

ಇಲ್ಲಿ ನೋಡಿ, ಮಿಕಿಯು ಯಾವ ವಸ್ತುಗಳನ್ನು ಚುಂಬಕದಿಂದ ಎತ್ತುತ್ತಲಿದ್ದಾನೆ?

ನೀವು ಕೂಡ ಈ ಮೋಜಿನ ಆಟ ಆಡಬಹುದು.

